ಧಾರವಾಡದಲ್ಲಿ ಹಿಂದಿ ವಿಶ್ವವಿದ್ಯಾಲಯಂ ಪ್ರಾರಂಭಿಸಂವ ಬಗ್ಗೆ.

೭೧೩. ಶ್ರೀ ಜ್ಞಾನ ದೇವ ದೊಡ್ಡ ಮೇಟಿ (ರೋಣ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಭಾರತ ಪ್ರಚಾರ ಸಭೆಯವರು ಧಾರವಾಡ ಹಿಂದಿ ವಿಶ್ವವಿದ್ಯಾಲಯ ಸ್ಥಾಪಿಸಲು ನಿರ್ಧರಿಸಂವ ವಿಷಯ ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ವಿಶ್ವವಿದ್ಯಾಲಯ ಸ್ಥಾಪಿಸುವ ಪೂರ್ವಭಾವಿಯಾಗಿ ರಾಜ್ಯದ ಸಾಹಿತಿಗಳ ಹಾಗೂ ಬರಹಗಾರರ ಬಳಗದವರ ಅಭಿಪ್ರಾಯ ಸಂಗ್ರಹ ಮಾಡಲಾಗಿದೆಯೇ ?

ಇ) ಧಾರವಾಡದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿರುವ ಹಿಂದಿ ವಿಶ್ವವಿದ್ಯಾಲಯಕ್ಕಾಗಿ ಸರಕಾರ ದವರು ಜಮೀನನ್ನು ನೀಡುವರೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ಇಲ್ಲ

ಆ) ಪ್ರಶ್ನೆ ಉದ್ಭವಿಸುವುದಿಲ್ಲಾ

ಇ) ಉದ್ಭವಿಸುವುದಿಲ್ಲ.

ಶಾಲಾ ಮಕ್ಕಳಿಗೆ ಮಧ್ಯಾಹ್ನದ ಉಪಹಾರ ನೀಡುವ ಬಗ್ಗೆ

೭೭೫(ಎ) ಶ್ರೀ ಪಂಪಾಪತಿ (ದಾವಣಗೆರೆ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಶಾಲಾ ಮಕ್ಕಳಿಗೆ ಮಧ್ಯಾಹ್ನದ ಉಪಹಾರ ವಿತರಣೆ ಮಾಡುತ್ತಿರುವ ಪದ್ಧತಿಯಿಂದ ಮಕ್ಕಳ ಆರೋಗ್ಯ ಕೆಟ್ಟು ವಾಂತಿ ಭೇದಿಯಾಗಿ ತೊಂದರೆ ಯಾಗುತ್ತಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಇಂತಹ ಯಾವುದೇ ದೂರು ಬಂದಿಲ್ಲ.

ಮೌಲ್ಯಮಾಪನ ದರಗಳನ್ನು ಹೆಚ್ಚಿಸದಿರುವುದರ ಕುರಿತಂ

೪೨೮(ಎ) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಡಿಪ್ಲೊಮಾ ವಿಷಯಗಳ ಮೌಲ್ಯಮಾಪನ ದರಗಳನ್ನು ಹೆಚ್ಚಿಸಲು ಸರ್ಕಾರದವರು ಒಪ್ಪಿಕೊಂಡಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಯಾವ ಯಾವ ವಿಷಯಗಳಿಗೆ ಸಂಬಂಧಿಸಿದಂತೆ ಮೌಲ್ಯಮಾಪನ ದರಗಳನ್ನು ಹೆಚ್ಚಿಸಲಾಗಿದೆ ?

ಇ) ಎಲ್ಲಾ ವಿಷಯಗಳ ಮೌಲ್ಯಮಾಪನ ದರಗಳನ್ನು ಹೆಚ್ಚಿಸದಿರಲು ಕಾರಣಗಳೇನು ?

ಈ) ಎಷ್ಟು ಸಮಯದೊಳಗೆ ಸದರಿ ಮೌಲ್ಯಮಾಪನ ದರಗಳನ್ನು ಹೆಚ್ಚಿಸುವರು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ತಾಂತ್ರಿಕ ಶಿಕ್ಷಣ ಪರೀಕ್ಷೆ ಮಂಡಳಿ ನಡೆಸುತ್ತಿರುವ ವಿವಿಧ ಪರೀಕ್ಷೆಗಳ ಮೌಲ್ಯಮಾಪನ ದರಗಳನ್ನು ಹೆಚ್ಚಿಸುವ ಬಗ್ಗೆ ಬಂದಿದ್ದ ಪ್ರಸ್ತಾವನೆಯಲ್ಲಿನ ೫೧ ಐಟಂಗಳಲ್ಲಿ ಬಹು ಮುಖ್ಯವಾದ ೪ ಐಟಂಗಳನ್ನು ಒಪ್ಪಿ ಈಗಾಗಲೇ ಆದೇಶ ಹೊರಡಿಸಲಾಗಿದೆ.